

# ವಿಶಿಷ್ಟ ವಾದ್ಯ ಹ್ಯಾಂಗ್‌ಡ್ರಮ್

ಲಯವಾದ್ಯಗಳಲ್ಲಿ ಬಹಳ ಜನಪ್ರಿಯವಾಗಿರುವುದು ಡ್ರಮ್ಸ್. ಆರ್ಕೆಸ್ಟ್ರಾಗಳಲ್ಲಿ ಪ್ರಮುಖ ವಾದ್ಯವಾಗಿರುವ ಡ್ರಮ್ಸ್ ಅನ್ನು ಜಾನಪದ ಸಂಗೀತ, ಲಘು ಸಂಗೀತಗಳಲ್ಲೂ ಬಳಸುವುದು ಚಾಲ್ತಿಯಲ್ಲಿದೆ.

ಸ್ವಿಟ್ಜರ್‌ಲೆಂಡ್‌ನ ಫೆಲಿಕ್ಸ್ ರೊಹ್ನರ್ ಮತ್ತು ಸಬಿನಾ ಸ್ಕಹರೆರ್ ಹ್ಯಾಂಗ್‌ಡ್ರಮ್ ಎಂಬ ವಿಶಿಷ್ಟ ಲಯವಾದ್ಯವನ್ನು ಕಂಡುಹಿಡಿದವರು.

ಸಮುದ್ರದ ಆಳದಿಂದ ತೆಗೆದ ಅರ್ಧರ್ಧದಂತೆ ಎರಡು ಚಿಪ್ಪುಗಳನ್ನು ಬಳಸಿ ಸ್ಟೀಲ್ ಶೀಟ್‌ಗಳನ್ನು ಅಳವಡಿಸಿ ಈ ಡ್ರಮ್ ಅನ್ನು ಸಿದ್ಧಗೊಳಿಸಲಾಗಿದೆ. ಇದರ ವಿನ್ಯಾಸ ವೃತ್ತಾಕಾರದಲ್ಲಿದ್ದು, ಮೇಲ್ಭಾಗದಲ್ಲಿ ಹ್ಯಾಮರ್ ಮೂಲಕ ಶ್ರುತಿ ಮಾಡಲು ಅನುವು ಮಾಡಿಕೊಡಲಾಗಿದೆ. (ತಬಲಾ–ಡಗ್ಗಾಗಳ ಮೇಲೆ ಹ್ಯಾಮರ್ ಬಳಸಿ ಶ್ರುತಿ ಮಾಡುವಂತೆ) ಇಲ್ಲಿ ಏಳೆಂಟು ರಂಧ್ರಗಳನ್ನು ಕೊರೆಯಲಾಗಿದ್ದು, ಈ ಮೂಲಕ ನಾದ ಸ್ಪಷ್ಟವಾಗಿ ಹೊಮ್ಮುವಂತೆ ವಿನ್ಯಾಸ ಮಾಡಲಾಗಿದೆ. ಕೆಳಭಾಗದಲ್ಲಿ ಶ್ರುತಿಯ ಸ್ಪಷ್ಟತೆ ಕೇಳುವಂತೆ ವ್ಯವಸ್ಥೆಯನ್ನೂ ಮಾಡಿದ್ದು ಈ ವಾದ್ಯದ ವಿಶೇಷತೆ.

ಈ ಹ್ಯಾಂಗ್ ವಾದ್ಯ ಒಮ್ಮಿಂದೊಮ್ಮೆಗೇ ಹುಟ್ಟಿದ ಅಥವಾ ಉದ್ಭವವಾದ ವಾದ್ಯವಲ್ಲ. ಹಲವಾರು ವರ್ಷಗಳ ಸಂಶೋಧನೆಯ ಫಲವಿದು. ವಾದ್ಯದ ಆಕಾರ, ಗಾತ್ರ, ನಾದ ಹೊಮ್ಮುವ ಬಗೆ, ನುಡಿಸಾಣಿಕೆಯ ಕ್ರಮ ಎಲ್ಲವನ್ನೂ ಕೂಲಂಕಷವಾಗಿ ಅಧ್ಯಯನ ಮಾಡಿ ತಯಾರಿಸಿದ ಡ್ರಮ್ ಇದು.

ಸಾಮಾನ್ಯವಾಗಿ ಡ್ರಮ್ಸ್ ಅನ್ನು ಸಣ್ಣ ಕೋಲು ಅಥವಾ ಬೇರಾವುದಾದರೂ ಸಾಧನದಿಂದ ಬಾರಿಸಲಾಗುತ್ತದೆ. ಆದರೆ ಈ ಡ್ರಮ್ಸ್ ಅನ್ನು ಕೈಯಿಂದಲೇ ನುಡಿಸುವುದು. ನಾದವೂ ಮಾಧುರ್ಯಭರಿತವಾದದ್ದು.

■ ಯು. ವೇಣೂರು

